Doc-255
T-P-2

R No KRNN 12 8-3-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

★★ Now in 57th Year ★★

'Satyavadi daily, Mysore 4

ಸ್ಥಾಪಕರು: ಅರಮನೆ ಹಿರಿಸ್ಕೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ನಮ್ಮಸ್ಕಾರವಿರಂ ಎಂ ಎಸ್ ಕೃಷ್ಣರಾವ್ 13 ಪ

ಶಿವಸೇನೆಯನ್ನು ಹತೋಟಿ ಮಾಡಲಾಗುವುದು

ಸರ್ಕಾರಿ ರೇಷ್ಮೆ ಫಿಲೇಚರ್ಸ್

ಸಂತೆಮರಹಳ್ಳಿ

ವಿಷಯ : ಉಪ – ಉತ್ಪಾದನೆಗಳನ್ನು ವಿಲೇವಾರಿ ಮಾಡುವುದು – ಟೆಂಡರ್‌ದಾರರಿಗೆ ಕರೆ

★

ಸಂತೆಮರಹಳ್ಳಿ ಕಾರ್ಖಾನೆಯಲ್ಲಿ, ಸರ್ಕಾರಿ ರೇಷ್ಮೆ ಫಿಲೇಚರ್ಸ್‌ನಲ್ಲಿ ದೊರಿಯುವ ಈ ಕೆಳಗೆ ಕಂಡ ಉಪ ಉತ್ಪಾದನೆಗಳನ್ನು "ಇರುವಂತೆ ಇರುವ ಕಡೆ" ಷರತ್ತುಗಳ ಮೇಲೆ ಕೊಡಲಾಗುವುದು

ಟೆಂಡರ್‌ದಾರರು ಯಾವುದೇ ಕೆಲಸದ ದಿನಗಳಲ್ಲಿ ಪರೀಕ್ಷಿಸಬಹುದು ಮತ್ತು ಸಂತೆಮರಹಳ್ಳಿಯಲ್ಲಿರುವ, ಸರ್ಕಾರಿ ರೇಷ್ಮೆ ಫಿಲೇಚರ್ಸ್ ಜನರಲ್ ಮ್ಯಾನೇಜರ್ ರವರಿಂದ ಪೂರ್ಣ ವಿವರಗಳನ್ನು ಪಡೆಯಬಹುದು.

ಅರ್ನೆಸ್ಟ್ ಹಣ ಠೇವಣಿಯೊಡನೆ ಟೆಂಡರ್‌ಗಳನ್ನು ಸ್ವೀಕರಿಸಲು ಕಡೆಯ ದಿನ 15-3-1974

ಪೆಡ್ಡಾಲು

ಪದಾರ್ಥ	ಅಂದಾಜು ಪ್ರಮಾಣ	ಇ. ಎಂ. ಡಿ.
1. ಕೆಳದರ್ಜೆ ಕರ್ಕೂಗಳು	250 ಕೆಜಿಗಳು	ರೂ. 100
2 ರ್ಯಾಟ್–ಕಟ್ ಕರ್ಕೂಗಳು	45 ,,	25
3 ಫ್ಲಾಸ್	192 ,,	50
4 ಡಬ್ಬಲ್ ಕರ್ಕೂಗಳು	240 ,,	100

ಸಹಿ/– ಟಿ.ಆರ್. ಸೋಮಸುಂದರ ರಾವ್,
ಜನರಲ್ ಮ್ಯಾನೇಜರ್, ಸರ್ಕಾರಿ ರೇಷ್ಮೆ ಫಿಲೇಚರ್ಸ್,
ಸಂತೆಮರಹಳ್ಳಿ.

ಟನಾಲನ್ನು ಬೇರ್ಪಡಿಸುವ ಯಂತ್ರ

ಬೀಲೆಫೆಲ್ಡ್ (ಜರ್ಮನಿ) — ಪಶ್ಚಿಮ ಜರ್ಮನಿಯ ಬೀಲೆಫೆಲ್ಡ್‌ನಲ್ಲಿ ರಾಷ್ಟ್ರದಲ್ಲೇ ಪ್ರಥಮ ಬಾರಿ ಟನಾಲನ್ನು ಬೇರ್ಪಡಿಸುವ ಸ್ವಯಂಚಾಲಿತ ಯಂತ್ರದ ಬಳಕೆಯನ್ನು ಮಾಡಿದ್ದಾರೆ; ಇದು ಗಂಟೆಗೆ 2000 ಕಾಗದಗಳನ್ನು ಬೇರ್ಪಡಿಸಬಲ್ಲದು ಅಷ್ಟೇ ಅಲ್ಲದೆ ಹಾಗೂ ಹಂಜಿಚೀಟು ತಪ್ಪಾಗಿದ್ದಿರುವ ಕಾಗದಗಳನ್ನು ಇದು ತಿರಸ್ಕರಿಸುತ್ತದೆ

★

ಪುನರ್ಜನ್ಮ

ಕ್ಯಾಲಿಫೋರ್ನಿಯಾದಲ್ಲಿ ಒಬ್ಬ ಹುಡುಗನು, ತಾನು ಹಿಂದಿನ ಜನ್ಮದಲ್ಲಿ ಪಿ. ಎ. ಜಯಸೇನನೆಂಬ ಹೆಸರಿನವನೆಂದೂ, ತಂದೆ ತಾಯಿಗಳು ಶ್ರೀ ಲಂಕಾದ ಉದುಗಂಪೋಲಕ್ಕೆ ಸೇರಿದವರೆಂದೂ ಚಾಲುತ್ತಿದ್ದಾನೆ. ಹಿಂದಿನ ಜನ್ಮದಲ್ಲಿನ ತನ್ನ ತಂದೆತಾಯಿಗಳನ್ನು ತಿಳಿಸುತ್ತಾನೆ; ಮತ್ತು ತಾನು ಓದುತ್ತಿದ್ದ ಸ್ಕೂಲನ್ನೂ ಜ್ಞಾಪಿಸಿಕೊಳ್ಳುತ್ತಿದ್ದಾನೆ – ಆಲ್ಲಿಂದ ಮೂರು ಮಂದಿ ಅನ್ಯರಿನ್ನರು ಶ್ರೀಲಂಕಾಕ್ಕೆ ಭೇಟಿ ಕೊಟ್ಟು ಹುಡುಗನು ತನ್ನ ತಂದೆತಾಯಿಗಳಿನ್ನು ನವರನ್ನು ಕಂಡು ಸಂತೋಷಪಡಿದರು ಮತ್ತು ಅವನು ಹೇಳಿದ ಸ್ಕೂಲಿನ ದಾಖಲೆಗಳನ್ನೆಲ್ಲಾ ಚೆಕ್ ಮಾಡಿ, ಎಲ್ಲ ವಿಷಯಗಳ ನಿಜಾಂಶ ಬಗ್ಗೆ ಅವರು ತೃಪ್ತಿಗೊಂಡರು. ಅವರು ಆ ಹುಡುಗನನ್ನು ಶ್ರೀ ಲಂಕಾಕ್ಕೆ ಕ್ಷಿಪ್ರದಲ್ಲೇ ಕರೆತರಲಿದ್ದಾರೆ.

— ಯುಗ ಭಾರತ

★

ಸತ್ತು ಬದುಕಿದ

ಬೊಂಬಾಯಿ– ಪೂನಾದ ಯರವಾಡಾ ಮಾನಸಿಕ ಆಸ್ಪತ್ರೆಯಲ್ಲಿನ ಒಬ್ಬ ರೋಗಿ ಸತ್ತು ಹೋಗಿರುವನೆಂದು ಸರ್ಟಿಫೈ ಮಾಡಿದ ನಂತರ 8 ಗಂಟೆ ಬದುಕಿದ್ದನೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು.

ನವದೆಹಲಿ— ಕೇಂದ್ರ ಆರೋಗ್ಯ ಮಂತ್ರಿ ಕರ್ಣಸಿಂಗರು 451 ಎಕ್ರೆ ಭೂಮಿ ಕೊಂಡಿದ್ದಾರೆ.

ಕರ್ನಾಟಕ ಬಡ್ಜೆಟ್

ಬೆಂಗಳೂರು— ಶಾಸನಸಭೆಯಲ್ಲಿ ಬುಧವಾರ ಮಂಡಿಸಿದ 74-75 ರ ಬಡ್ಜೆಟ್‌ನಲ್ಲಿ ಪ್ರಸ್ತಾವನೆಗಳಿರುವ ರೂ 34.28 ಕೋಟಿ ಭರ್ತಿ ಮಾಡಲು ರೂ 19 ಕೋಟಿಗೆ ಹೊಸ ತೆರಿಗೆಗಳು ಯೋಜಿಸಲಾಗಿದೆ – ಮಿಕ್ಕ ರೂ. 16 78 ಕೋಟಿ ಭರ್ತಿಗೆ ವಿವಿಧ ಮಾರ್ಗಗಳು ಕಾಣಿಸಲ್ಪಟ್ಟಿವೆ – ಹೆಂಡ ಸಾರಾಯಿ ಮೇಲೆ ಅಬ್ಕಾರಿ ಸುಂಕ, ಸಾರಾಯಿ ಮೇಲೆ ರಫ್ತು ತೆರಿಗೆ, ಮನರಂಜನೆ ತೆರಿಗೆ ಹೆಚ್ಚಿಸುವುದು, ಸ್ಟ್ಯಾಂಪು ಡ್ಯೂಟಿ, ಪಟ್ಟಣಗಳಲ್ಲಿ ಭೂ ಕಂದಾಯ ವಾಹನಗಳ ಮೇಲೆ ತೆರಿಗೆ. ಇತ್ಯಾದಿಗಳಿವೆ – ತುಟ್ಟಿಭತ್ಯೆಗಳನ್ನು ಹೆಚ್ಚಿಸಲಾಗಿದೆ – ಎಜಿಓಗಳ ಬಗ್ಗೆ ಮತ್ತೆ ಪೇಕಮಿಷನ್ನೇಮಕವಿದೆ – ಸೇಲ್ಸ್ ಟ್ಯಾಕ್ಸುಗಳು ಹೆಚ್ಚಿಸಲಾಗಿದೆ.

ಈ ಬಡ್ಜೆಟ್ ಯೋಜಿತಗಳ ಜನತಾ ವಿರುದ್ಧವು ಮತ್ತು ಶ್ರೀಸಾಮಾನ್ಯನಿಗೆ ಭಾರಿ ಪೆಟ್ಟು ಎಂದು ಶಾಸನ ಸಭೆಯಲ್ಲಿ ವಿರೋಧ ಸದಸ್ಯರು ಅಭಿಪ್ರಾಯಪಟ್ಟರು

★

ಶಿವಸೇನೆ ಮೇಲೆ ಹತೋಟಿ

ನವದೆಹಲಿ– ಬೊಂಬಾಯಿನಲ್ಲಿ ಭಾಷಾವಾರು ಅಲ್ಪಸಂಖ್ಯಾತರ ಮೇಲೆ ಶಿವಸೇನೆ ಹಾವಳಿ ಮಟ್ಟಹಾಕಲಾಗುವುದೆಂದೂ, ಪರಿಸ್ಥಿತಿಯು ಮತ್ತೂ ಹರಡಲು ಅವಕಾಶ ಕೊಡುವುದಿಲ್ಲವೆಂದೂ ಲೋಕ ಸಭೆಯಲ್ಲಿ ಭರವಸೆ ನೀಡಲಾಯಿತು.

ಪೆಟ್ರೋಲು ಜೆಲೆ ಏರಿಕೆ ವಿರುದ್ಧ

ಚಿಕ್ಕಮಗಳೂರು– ಜಿಲ್ಲಾ ಮೋಟಾರು ಕಾರ್ಮಿಕರ ಸಂಘವು ಪೆಟ್ರೋಲು ಬೆಲೆ ಏರಿಕೆ ವಿರುದ್ಧ ಬುಧವಾರ ಪ್ರದರ್ಶನ ನಡೆಸಿತ್ತು – ಕಾರುಗಳ, ಟ್ಯಾಕ್ಸಿಗಳ, ಆಟೋರಿಕ್ಷಾಗಳ ಭಾರಿ ಮೆರವಣಿಗೆ ನಡೆಸಲಾಯಿತು.

★

ಪೌರಕಾರ್ಮಿಕರಿಗೆ ಕಮಿಷನರ್‌ರವರ ಹಿತೋಕ್ತಿ

ಮೈಸೂರು— ಪುರಸಭಾ ಕಮಿಷನರ್ ಶ್ರೀ ಸ್ವತಂತ್ರರಾವ್‌ರವರು ಮಂಗಳವಾರ ಟೌನ್‌ಹಾಲ್‌ನಲ್ಲಿ ಪೌರಕಾರ್ಮಿಕ ಸಂಘದ ನೌಕರರನ್ನು ಕುರಿತು ಮಾಡಿದ ಭಾಷಣದಲ್ಲಿ– ಅವರು ಹೆಂಡ ಸಾರಾಯಿ ಮುಂತಾದ ಮಾದಕ ಪದಾರ್ಥಗಳ ಸೇವನೆಯನ್ನು ತ್ಯಜಿಸಿ, ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡಬೇಕೆಂದು ಹೇಳಿದರು. ಅವರ ಕುಂದುಕೊರತೆ ಪರಿಶೀಲಿಸಿ, ಅವಶ್ಯಕವಾದ ಸೌಕರ್ಯಗಳನ್ನು ಒದಗಿಸುತ್ತಿರುವದನ್ನು ವಿವರಿಸಿದರು ; ಮತ್ತೂ ಅನೇಕ ಹಿತ ಬೋಧೆ ಮಾಡಿದರು – ಅವರು ಇಂಗ್ಲೀಷಿನಲ್ಲಿ ಮಾಡಿದ ಭಾಷಣವನ್ನು ರೆವಿನ್ಯೂ ಆಫೀಸರ್ ಶ್ರೀ ಅನಂತರಾಮಯ್ಯನವರು ಕನ್ನಡಕ್ಕೆ ತರ್ಜುಮೆ ಮಾಡಿದರು – ಎಕ್ಸಿಕ್ಯುಟಿವ್ ಇಂಜಿನಿಯರ್ ಶ್ರೀ ಸಿದ್ಧಲಿಂಗಪ್ಪನವರು ಅವರಿಗೆ ಮಾಡುತ್ತಿರುವ ವಸತಿ ಸೌಕರ್ಯಗಳನ್ನು ತಿಳಿಸಿದರು – ಟೌನ್‌ಹಾಲ್‌ನಲ್ಲಿ ಪೌರಕಾರ್ಮಿಕರು ತಿಕ್ಕಿರಿದು ತುಂಬಿದ್ದುದು ಈ ಕಟ್ಟಡದ ಇತಿಹಾಸದಲ್ಲೇ ಪ್ರಪ್ರಥಮವಾದುದಾಗಿದೆ.

★

ಮಹಿಳಾ ಪೋಲೀಸರು

ಟೋಕಿಯೋದಲ್ಲಿ ಬಿಳಿ ಕಂಠವಸ್ತ್ರವನ್ನು ಹೊದ್ದು ನಾಜೂಕಾದ ಟೊಪ್ಪಿಯನ್ನು ಧರಿಸಿ ಮೊಣಕಾಲು ಮೇಲಿನ ಲಂಗವನ್ನು ತೊಟ್ಟು ನಗರ ಬೀದಿಯಲ್ಲಿ ಕಾಣುವ ಮಹಿಳಾ ಪೋಲೀಸರು ತಮ್ಮ ಗಂಡಸು ಕೆಲಸಗಾರರಿಗಿಂತ ಎಷ್ಟೋ ಪಾಲು ಆಕರ್ಷಣೀಯರಾಗಿದ್ದಾರೆ; ತಮ್ಮ ಕರ್ತವ್ಯವನ್ನೂ ಸರಿಯಾಗಿ ಪಾಲಿಸುತ್ತಿದ್ದಾರೆ.

Quality Printing Neat Binding

Lakshminarasimha Press

Sivarampet, Mysore 1

Contribute Liberally

to the National Defence Fund

SHAKTI SUDHA

A Superb Tonic

Help The Gorakshana

— HumanitarianPropoganda Monthly ....

ವುಡ್‌ಲಾಂಡ್ 8 3 74 ರಿಂದ

ಅಮೋಘ 2 ನೇ ವಾರ

ಹಿಂದಿ ಕಲರ್ ಮಹೋನ್ನತ ಚಿತ್ರ

ಧರ್ಮ

ಪಾತ್ರ – ಸ್ರಾಣ್, ನವೀನ್ ನಿಶ್ಚಲ್, ರೇಖ

ದಿನ 3 ಪ್ರದರ್ಶನಗಳು

★

ಅಪೇರಾ 20 2 74 ರಿಂದ

ನಾನೂ ಬಾಳಬೇಕು

ಪಾತ್ರ — ಉದಯಕುಮಾರ್ ಆರತಿ

ಕಥೆ – ನಿರ್ಮಾಪಕ : ಗೋಪಿ ಸಂಗೀತ : ಆರ್. ರತ್ನ

ಚಿತ್ರಕಥೆ, ಸಾಹಿತ್ಯ, ನಿರ್ದೇಶನ – ಸತ್ಯನಾರಾಯಣ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore